ಅಸಲುದಾವಾ: 1/2011. ಪಿ.ಡಬ್ಲ್ಯು: 1

ಸಾಕ್ಷಿಯನ್ನು ದಿನಾಂಕ: 02-11-2016 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:

ಸಾಕ್ಷೀದಾರರು ಗುರ್ತಿಸಿದ ಒಂದು ವಂಶವೃಕ್ಷವನ್ನು ನಿಪಿ: 1 ಎಂದು ಹಾಗೂ ಅರ್ಜಿದಾರರ ಚುನಾವಣಾ ಗುರ್ತಿನ ಚೀಟಿಯನ್ನು ನಿಪಿ: 2 ಎಂದು ಗುರ್ತಿಸಲಾಯಿತು

ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ. ಬಿ.ಎಸ್.ಎನ್.ಕೆ. ವಕೀಲರಿಂದ:

ಸಿ.ಡಿ.ಎಸ್.ಬೇಗಂಷಾರವರು ಮೃತಪಟ್ಟಾಗ ನನಗೆ 28 ವರ್ಷ ವಯಸ್ಸಾಗಿತ್ತು. ಸಿಡಿಎಸ್ ಬೇಗಂಷಾ ಮರಣ ಹೊಂದುವ ಎರಡು ವರ್ಷಗಳ ಮೊದಲು ಅವರು ಹಾಸಿಗೆ ಹಿಡಿದಿದ್ದರು ಎಂದು ಕಾಣಿಸುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರ್ಪಡಿಸಿಲ್ಲ. ಸಿಡಿಎಸ್. ಬೇಗಂಷಾರವರು ಅನಾರೋಗ್ಯ ಪೀಡಿತರಾಗಿದ್ದ ಕಾಲದಲ್ಲಿ ಅವರನ್ನು ವೈದ್ಯರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ಕಾಣಿಸುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರ್ಪಡಿಸಿಲ್ಲ. ನಿಪಿ: 1 ವಂಶವೃಕ್ಷವನ್ನು ನನ್ನ ಹೇಳಿಕೆಯ ಮೇರೆಗೆ ಬರೆಯಲಾಗಿದೆ ಎಂದರೆ ಸರಿ . ನಿಪಿ: 1 ದಾಖಲಾತಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಸಿಡಿಎಸ್. ಬೇಗಂಷಾರವರ ವಾರಸುದಾರನಲ್ಲ ಎಂದರೆ ಸರಿಯಲ್ಲ. ಸಿಡಿಎಸ್ ಬೇಗಂಷಾರವರಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಆಕೆಯ ವಾರಸುದಾರ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು 3ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು,

(ನನ್ನ ಉಖ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ತೆರೆದ
ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ.ಸಾ.ಒ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಶ್ರೀರಂಗಪಟ್ಟಣ.